# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಜಿಎಂ-3133&3134/2015/ಪಿ.ಪಿ ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ: 22/06/2020.

## ಮಾನ್ಯ ಘನತೆವೆತ್ತ ರಾಜ್ಯಪಾಲರ ಸನ್ನಿಧಿಗೆ ವಿಶೇಷ ವರದಿ
## ಕಲಂ 12(5) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರಡಿಯಲ್ಲಿ.

ವಿಷಯ: ಶ್ರೀ.ಸುಧೀರ್ ಯಶವಂತ್ ನೇಸರಕರ್, ರೈತಗಲ್ಲಿ, ಪೀರನವಾಡಿ, ಬೆಳಗಾವಿ ಇವರು ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯಾ ಕ್ರಮ ಜರುಗಿಸುವ ಕುರಿತು.

ಉಲ್ಲೇಖ: ಕಲಂ 12(1) ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರಡಿ ಸಲ್ಲಿಸಿದ ವರದಿ ದಿನಾಂಕ: 19/1/2018.

* * * * * *

ಶ್ರೀ.ಸುಧೀರ್ ಯಶವಂತ್ ನೇಸರಕರ್, ರೈತಗಲ್ಲಿ, ಪೀರನವಾಡಿ, ಬೆಳಗಾವಿ ಇವರು (ಇನ್ನು ಮುಂದೆ ದೂರುದಾರರು ಎಂದು ಕರೆಯಲಾಗುತ್ತದೆ). ಇವರು ಶ್ರೀ. ಎಸ್.ವೈ. ಸುಳಕೋಡ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ದಕ್ಷಿಣ ಉಪವಿಭಾಗ-1, ಮಹಾನಗರ ಪಾಲಿಕೆ ಟಿಳಕವಾಡಿ, ಬೆಳಗಾವಿ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಸಾರ್ವಜನಿಕ ಕರ್ತವ್ಯ ಲೋಪದ ದೂರನ್ನು ಸಲ್ಲಿಸಿದ್ದು, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ (9) ರಡಿ ಈ ದೂರನ್ನು ತನಿಖೆಗಾಗಿ ತೆಗೆದುಕೊಳ್ಳಲಾಗಿರುತ್ತದೆ.

2. ದೂರಿನಲ್ಲಿ ಆದರಿಸಿದಂತೆ, ಬೆಳಗಾವಿಯ ರಾಜಾರಾಂ ನಗರದ ನಿವೇಶನ ಸಂಖ್ಯೆ. 46ರಲ್ಲಿ ಚನ್ನಪ್ಪ ತಳವಾರ ಎನ್ನುವವರು ಮಹಾನಗರ ಪಾಲಿಕೆಯ ಅಧಿಕೃತ ಪರವಾನಿಗೆ ಪಡೆಯದೇ ವಲಯ ನಿಯಮಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ್ದು, ಸದರಿ ಕಟ್ಟಡವನ್ನು

ತೆರವುಗೊಳಿಸುವಂತೆ ಎದುರುದಾರರಿಗೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದರೂ ಈ ಕುರಿತು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ, ಆದ್ದರಿಂದ ಅನಧಿಕೃತವಾಗಿ ಮಹಾನಗರ ಪಾಲಿಕೆಯ ಪರವಾನಿಗೆ ಇಲ್ಲದೇ ನಿರ್ಮಿಸಿರುವ ಕಟ್ಟಡ ತೆರವುಗೊಳಿಸಲು ಕುರಿತಂತೆ ಅಗತ್ಯ ಕ್ರಮ ಕೈಗೊಳ್ಳಲು ಕೋರಿ ಈ ದೂರನ್ನು ಸಲ್ಲಿಸಲಾಗಿದೆ.

3. ಮೇಲ್ನೋಟಕ್ಕೆ ಈ ದೂರು ತನಿಖೆಗೆ ಯೋಗ್ಯವಾಗಿರುವುದರಿಂದ ಹಾಗೂ ಎದುರುದಾರರ ವಿರುದ್ಧ ಸಾಕಷ್ಟು ಆಧಾರಗಳು ಕಂಡುಬಂದಿದ್ದರಿಂದ ಈ ಬಗ್ಗೆ ವಿವರವಾದ ಕೂಲಂಕುಷವಾಗಿ ತನಿಖೆ ನಡೆಸಿದಾಗ, ಮಹಾನಗರ ಪಾಲಿಕೆ ಬೆಳಗಾವಿ ಇವರಿಂದ ಎಸ್. ಸಿ. ತಳವಾರ ಇವರಿಗೆ ಅವರು ನಿರ್ಮಿಸಿದ ಕಟ್ಟಡ ಅನಧಿಕೃತವಾಗಿರುತ್ತದೆ ಎಂದು 3 ನೊಟೀಸು ಕೂಡ ನೀಡಲಾಗಿದ್ದು, ಕಾರಣ ಈ ವಿಷಯ ಎದುರುದಾರರಿಗೆ ಗೊತ್ತಿದ್ದರೂ ಕೂಢ ಸದರಿಯವರು ಅನಧಿಕೃತ ಕಟ್ಟಡ ನಿರ್ಮಾಣವನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬಂದಿರುವುದರಿಂದ ಈ ಬಗ್ಗೆ ಬೆಳಗಾವಿ ರಾಜಾರಾಂ ನಗರದ ನಿವೇಶನ ಸಂಖ್ಯೆ. 46ರಲ್ಲಿ ಎಸ್.ಸಿ. ತಳವಾರ್ ಇವರು ಅನಧಿಕೃತವಾಗಿ ನಿರ್ಮಿಸಿದ ಕಟ್ಟಡ ತೆರವುಗೊಳಿಸಲು, ಮತ್ತು ತೆರವುಗೊಳಿಸಿದ ನಂತರ ವರದಿ ಮಾಡಲು ಸರ್ಕಾರ/ಸಕ್ಷಮ ಪ್ರಾಧಿಕಾರವಾದ ನಗರಾಭಿವೃದ್ಧಿ ಇಲಾಖೆಗೆ ಕ.ಲೋ. ಕಾಯ್ದೆ 1984, ಕಲಂ 12(1)ರಡಿ ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಲಾಗಿತ್ತು.

4. ತನಿಖಾ ಸಂಗತಿಗಳು ಈ ಪ್ರಕರಣದಲ್ಲಿ ಅನಧಿಕೃತವಾಗಿ ನಿರ್ಮಿಸಲಾದ ಕಟ್ಟಡವನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳುವ ಕುರಿತು ದೃಢೀಕರಿಸಿರುತ್ತವೆ. ಆದರೆ ಸಕ್ಷಮ ಪ್ರಾಧಿಕಾರವಾದ ಸರ್ಕಾರ/ನಗರಾಭಿವೃದ್ಧಿ ಇಲಾಖೆ, ಈ ಕುರಿತು ಯಾವುದೇ ರೀತಿಯ ಅಗತ್ಯ ಕ್ರಮ ಜರುಗಿಸದೇ ಇರುವುದು ಕಂಡುಬಂದಿರುತ್ತದೆ.

5. ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(1) ರಡಿ ಶಿಫಾರಸ್ಸು ವರದಿಯನ್ನು ಜಾರಿಗೊಳಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(2) ಅಡಿ ಅನುಪಾಲನೆ ಮಾಡಿ

ವರದಿಯನ್ನು ಸಲ್ಲಿಸುವಂತೆ ಸಕ್ಷಮ ಪ್ರಾಧಿಕಾರವಾದ ಸರ್ಕಾರ/ನಗರಾಭಿವೃದ್ಧಿ ಇಲಾಖೆಗೆ ದಿ. 6.3.2019, 6.5.2019, 18.7.2019, 10.10.2019, 12.12.2019 ರಂದು ಪತ್ರಗಳನ್ನು ಬರೆಯಲಾಗಿದ್ದರೂ ಈ ಕುರಿತು ಸರ್ಕಾರವು ವರದಿಯ ಅನುಪಾಲನೆ ಕುರಿತು ಯಾವುದೇ ರೀತಿಯ ಅಗತ್ಯ ಕ್ರಮ ಜರುಗಿಸಿರುವುದಿಲ್ಲ.

6. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 12(5) ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ವಿಶೇಷ ವರದಿಯನ್ನು ಕಲಂ 12(5) ಅಡಿ ಘನತೆವೆತ್ತ ರಾಜ್ಯಪಾಲರ ಸನ್ನಿಧಿಗೆ ಸಲ್ಲಿಸುತ್ತಿದ್ದೇನೆ.

N. Anand 22/6

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ.